ಪಕ್ಷದ ನಾಯಕರನ್ನು ಕರೆದು, ನಮ್ಮ ಸರ್ಕಾರದ ಅಭಿಪ್ರಾಯವನ್ನು ಸಂಪುಟಕ್ಕೆ ತೆಗೆದು ಕೊಂಡು ಹೋಗುವುದಕ್ಕೆ ಮುಂಚೆ ಇದನ್ನೆಲ್ಲಾ ತಿಳಿದುಕೊಂಡು ಆ ನಂತರ ನಾನು ಕಳುಹಿಸಿಕೊಡುತ್ತೇನೆ.

(ಉ) ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಕಟ್ಟಡದ ನಿರ್ಮಾಣ ಹಂತದಲ್ಲಿ 3 ಜನರ ಸಾವು.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) :- ಮಾನ್ಯ ಉಪಾಧ್ಯಕ್ಷರೇ, ಮೊನ್ನೆ ದಿವಸ ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಒಂದು ಕಟ್ಟಡವನ್ನು ನಿರ್ಮಾಣ ಮಾಡುವಾಗ ಆ ಕಟ್ಟಡದ ಕೆಲಸ ಮಾಡುವಂಥ 3 ಜನ ಕಾರ್ಮಿಕರು ಪ್ರಾಣ ಬಿಟ್ಟಿದ್ದಾರೆ. 18 ವರ್ಷದ ಇನ್ನೊಬ್ಬ ಹುಡುಗ ಆಸ್ಪತ್ರೆಯಲ್ಲಿ ಇದ್ದಾನೆ. ಆತ ಯಾವ ಗಳಿಗೆಯಾಲ್ಲಾದರೂ ಸಾಯಬಹುದು. ಒಬ್ಬ ಹೆಂಗಸಿಗೆ ಕಾಲು ಮುರಿದು ಹೋಗಿದೆ. ನಮ್ಮ ಗೃಹ ಸಚಿವರು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಇದು ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ 94 ನೇ ವಾರ್ಡಿಗೆ ಬರುತ್ತದೆ. ಆ ಕಟ್ಟಡ ಏನು ಕಟ್ಟಿಸುತ್ತಾ ಇದ್ದಾರೆ ಆ ವ್ಯಕ್ತಿ ಕಾರ್ಪೊರೇಷನ್ನಿನಿಂದ ಯಾವುದೇ ವಿಧವಾದಂಥ ಪ್ಲಾನ್‌ನ್ನು ತೆಗೆದುಕೊಂಡಿಲ್ಲ. ನಿನ್ನೆ ಸಂಜೆಯವರೆಗೆ ಕಾರ್ಪೊರೇಷನ್‌ನಿಂದ ಯಾವ ಇಂಜಿನೀಯರೂ ಕೂಡ ಹೋಗಿ ಆ ಸ್ಥಳವನ್ನು ಪರಿಶೀಲನೆ ಮಾಡಿಲ್ಲ. ಆ ಪರಿಸ್ಥಿತಿ ಅಲ್ಲಿ ಇದೆ. ಅಲ್ಲಿ ಸತ್ತಂಥವರಿಗೆ ಮಂತ್ರಿಗಳು 50 ಸಾವಿರ ರೂಪಾಯಿ ಕೊಡಬೇಕೆಂದು ಅಲ್ಲಿ ಜನರು ಹೇಳಿದರು. ನಿನ್ನೆ ಸಂಜೆಯವರೆಗೆ ಅಲ್ಲಿ ಯಾರಿಗೂ ಹಣ ಒದಗಿಸಿಲ್ಲ. ಶವಸಂಸ್ಕಾರಕ್ಕೆ ಸಹಾಯ ಮಾಡಿದ್ದಾರೆ. ಆ ಕಟ್ಟಡವನ್ನು ಕಟ್ಟಿದಂಥ ವ್ಯಕ್ತಿ ಇದಕ್ಕೆ ಮುಂಚೆ ಒಂದು ಸಲ ಬಿ.ಡಿ.ಎ. ಎಂದು ಬರೆದಂಥ ಒಂದು ದೊಡ್ಡ ಬೋರ್ಡ್ ಬಿದ್ದು ಹೋಗಿ ಅಲ್ಲಿ ಒಬ್ಬ ಸತ್ತಿದ್ದರು. ಆವರಿಗೂ ಕೂಡ ಆತ ಸಹಾಯ ಮಾಡಿಲ್ಲ. ದಯಮಾಡಿ ಸಚಿವರು ಇದರ ಕಡೆಗೆ ಗಮನಹರಿಸಬೇಕು.

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಆ ಸ್ಥಳಕ್ಕೆ ನಾನು ನಿನ್ನೆ ಹೋಗಿದ್ದೆ. ನಿನ್ನೆ ಬೆಳಿಗ್ಗೆ ಒಂದು ಸಲ ಮತ್ತು ಸಾಯಂಕಾಲ ಒಂದು ಸಲ ಹೋಗಿದ್ದೆ. ನಿನ್ನೆ ರಾತ್ರಿ 8 ಗಂಟೆಗೆ ಅಲ್ಲಿಗೆ ಹೋದಾಗ ಅವರ ಸಂಬಂಧಿಕರು ಇನ್ನೂ ಸ್ಮಶಾನದಿಂದ ವಾಪಾಸ್ಸು ಬಂದಿರಲಿಲ್ಲ. ಅವರ ಹತ್ತಿರದ ಸಂಬಂಧಿಕರು ಇದ್ದಾರೆ, ಅವರು ಬರಲಿ ಎಂದು ಪೋಲೀಸರೇ ಸ್ವಲ್ಪ ಸಮಯಾವಕಾಶ ಕೇಳಿದರು. ಅವರಿಗೆ ಏನು 50 ಸಾವಿರ ರೂಪಾಯಿ ಸಮವಾಗಿ ಕೊಡುವಂಥದ್ದು ಇದೆ ಅದನ್ನು ಇವತ್ತು ನಾನು ಹೋಗಿ ಹಂಚಿಕೊಟ್ಟು ಬರುತ್ತೇನೆ.

ಶ್ರೀ ಬಿ. ಮುನಿಯಪ್ಪ :- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಾವುದೇ ಒಂದು ಕಟ್ಟಡವನ್ನು ಕಟ್ಟಬೇಕಾದರೆ ಮಹಾನಗರ ಪಾಲಿಕೆಯಿಂದ ಪ್ಲಾನ್ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಪ್ಲಾನ್ ತೆಗೆದುಕೊಂಡಿಲ್ಲ. ಅದೇ ಸಂದರ್ಭದಲ್ಲಿ ಅನಾಹುತವಾದ ಮೇಲೆ ಆ ಸ್ಥಳಕ್ಕೆ ಯಾವುದೇ ಒಬ್ಬ

ಇಂಜಿನೀಯರ್ ಹೋಗಲಿಲ್ಲವೆಂದು ಹೇಳಿದರೆ ಅವರು ಕರ್ತವ್ಯ ಭ್ರಷ್ಟರಾಗಿದ್ದಾರೆ. ಅಂತಹ ಇಂಜಿನೀಯರ್ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದಕ್ಕೆ ನಾನು ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

(ಊ) ಐ.ಟಿ.ಐ. ವಿದ್ಯಾರ್ಥಿಗಳ ಸ್ಟಾಫ್ ಮತ್ತು ನಾನ್ ಟೀಚಿಂಗ್ ಸ್ಟಾಫ್ ಕುರಿತು.

ಶ್ರೀ ಜಿ. ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಉಪಾಧ್ಯಕ್ಷರೇ, ಕಳೆದ ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಐಟಿಐ ವಿದ್ಯಾರ್ಥಿಗಳು ಮತ್ತು ಅದರಲ್ಲಿ ಪಾಠ ಮಾಡತಕ್ಕಂಥ ಸ್ಟಾಫ್ ಮತ್ತು ನಾನ್ ಟೀಚಿಂಗ್ ಸ್ಟಾಫ್‌ರವರೆಲ್ಲರೂ ಕೂಡ ಅಮರಣಾನಂತರ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ನಾವು ಆ ಪ್ರಶ್ನೆಯನ್ನು ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಎರಡೂ ಕಡೆ ಕೂಡ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಸರ್ಕಾರವು 'ಅವರನ್ನೆಲ್ಲ ಖಾಯಂ ಮಾಡುತ್ತೇವೆ' ಎನ್ನುವಂಥ ಒಂದು ಆಶ್ವಾಸನೆಯನ್ನು ಕೊಟ್ಟಿತ್ತು. ಆದರೆ ಸರ್ಕಾರ ಈಗ ಐಟಿಐನಲ್ಲಿ 12 ಸಾವಿರ ಜನ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಆದರೆ 12 ಸಾವಿರ ಜನ ಅದರಲ್ಲಿ ಇಲ್ಲ. ಅಲ್ಲಿ ಎಷ್ಟು ಜನ ಇದ್ದಾರೆ ಎನ್ನುವುದಕ್ಕೆ ಅವರು ತಮ್ಮ ಸಂಘದ ಮುಖಾಂತರ ಒಂದು ಲಿಸ್ಟನ್ನೇ ಕೊಟ್ಟಿದ್ದಾರೆ. ಅದಷ್ಟಲ್ಲಿ ಸರ್ಕಾರ ಹೇಳಿರುವಷ್ಟು ಜನ ಕೆಲಸ ಮಾಡುತ್ತಿಲ್ಲ. ಆದರೆ 1500 ಜನ ಮಾತ್ರ ಇದ್ದಾರೆ. ಅವರು ಕೊಟ್ಟ ಪಟ್ಟಿಯಲ್ಲಿ ಈ ರೀತಿ ಇದೆ. ಸರ್ಕಾರದಿಂದ ನೇರವಾಗಿ ನಡೆಸುತ್ತಿರತಕ್ಕಂಥದ್ದರಲ್ಲಿ 310 ಜನ ಬಿ.ಇ. ಮಾಡಿರತಕ್ಕಂಥವರು, 258 ಜನ ಡಿಪ್ಲೊಮಾ ಮಾಡಿರತಕ್ಕಂಥವರು, ವರ್ಕರ್ ಟೀಚರ್ಸ್ 508 ಜನ, ಕ್ಲರ್ಕ್ಸ್ 24, ಪಿಯೋನ್ಸ್ 20 ಜನ 5 ವರ್ಷಕ್ಕೂ ಮೇಲ್ಪಟ್ಟು ಕೆಲಸ ಮಾಡಿರತಕ್ಕಂಥವರು 409 ಜನ, 2 ವರ್ಷ ಕೆಲಸ ಮಾಡಿರತಕ್ಕಂಥವರು 525 ಜನ, 2 ವರ್ಷಕ್ಕಿಂತ ಕೆಳಗಡೆ ಇರತಕ್ಕಂಥವರು 186 ಜನ.

ಉಪಾಧ್ಯಕ್ಷರು :- ನೀವು ಕೇವಲ ಪ್ರಸ್ತಾಪ ಮಾಡಬೇಕಷ್ಟೆ. ನೀವು ಓದುತ್ತಾ ಇದ್ದರೆ ಹೇಗೆ?

ಶ್ರೀ ಜಿ. ಎ. ಶ್ರೀ ರಾಮರೆಡ್ಡಿ :- ಆದ್ದರಿಂದ ಸಂಖ್ಯೆ ಜಾಸ್ತಿಯಾಗಿದೆಯೆಂದು ಸರ್ಕಾರ ಒಪ್ಪಿಕೊಂಡಿದ್ದರೂ ಕೂಡ ಇದುವರೆಗೂ ಖಾಯಂ ಮಾಡುವುದಕ್ಕೆ ಆದೇಶ ಕೊಟ್ಟಿಲ್ಲ. ಅವರು ಬಹಳ ತೊಂದರೆಯಲ್ಲಿದ್ದಾರೆ. ಆದ್ದರಿಂದ ತಕ್ಷಣ ಸರ್ಕಾರ ಏನು ಆಶ್ವಾಸನೆ ಕೊಟ್ಟಿದೆ ಅದನ್ನು ಈಡೇರಿಸಬೇಕು ಅವರನ್ನು ಖಾಯಂ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.